249

ಕೋಲಾರ ಡಿಸ್ಟ್ರಿಕ್ಟ.

ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ ಆಫಿಸರವರಿಂದ.

ತಾರೀಖು 29ನೇ ಮಾಹೆ ಫಿಬ್ರವರಿ ಸ್ಟ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ಯರ್ರನಾ ರೇನಹಳ್ಳಿ ಮಜರೆ ನಾರೇನಹಳ್ಳಿ ಯಂಬ ಜೀ

1ನೇ ಸಾಲಿಗೆ	ಕಂದಾಯ	15—12—0	ಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ
2ನೇ ಡಿಟೋ	ಡಿಟೋ	31— 8—0	ಇನಾಂ ಶಿವಾಯಿ ಜಪ್ತ ಸರ್ಕಾರಿ ಬಾಬತು
3ನೇ ಡಿಟೋ	ಡಿಟೋ	47— 4—0	ಖಿ—ಖೆಗೆ ಆಕಾರ 155—12—0 ರೂ
4ನೇ ಡಿಟೋ	ಡಿಟೋ	63— 0—0	ಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ
5ನೇ ಡಿಟೋ	ಡಿಟೋ	78—12—0	ಜಮ್ರ್ಗಳನ್ನೂ ಬಾಜೂದಲ್ಲಿ ಕಾಣಿಸಿ ಇರುವ
6ನೇ ಡಿಟೋ	ಡಿಟೋ	94— 8—0	ಅಳವೆ ಕಂದಾಯದ ಮೇಲೆ ಸಾಗುವಳಿಗೆ
7ನೇ ಡಿಟೋ	ಡಿಟೋ	110— 4—0	ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆ
8ನೇ ಡಿಟೋ	ಡಿಟೋ	126— 0—0	ಧಾರವಾಗಿರುವ ಕಿಕಸ್ತು ಕಲ್ಲುಭೂವಿ ಮೂರು
9ನೇ ಡಿಟೋ	ಡಿಟೋ	141—12—0	ಕುಂಟೆ ವಂದು ಸಹ ದುರಸ್ತು ಮಾಡಿಸಿಕೊಂಡು
10ನೇ ಡಿಟೋ	ಡಿಟೋ	155—12—0	ತರೀ ಬಾಗಾಯತು ಜಮ್ರ್ಗಳಿಗೆ ನೀರುಕ

ಟ್ಟಿಕೊಳ್ಳುತ್ತಾ ಖುಷ್ಕೀ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ, ಭೂವಿ, ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದಂತಲೂ ಇದು ಪೀಚಿರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರ್‌ಗಳಲ್ಲಿ ಇರತಕ್ಕ ಮಾಲ್ಕಿ ಸ್ವತ್ತು ಸೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ಮಾಲ್ಕಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಅದನ್ನ ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ್ ಅಳವೆ ಕಾಲದಲ್ಲಿ ದರ ಸಾಲ್ 10ನೇ ವಂದು ಭಾಗದ ಮೇರಿಗೆ ಅಳವೆ ಆಖ್ಯೈರ್ ವಾಯಿದೆ ವಳಗೆ ಪೂರಾ ಜಮ್ರ್ ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮ್ರ್ಗಳಿಗೆ ಪೂರಾ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬದನೂರು ತಾಲ್ಲೂಕು ಅರಸಾಲ್ ಬಂಡೆ ವುರಫ್ ಮಾವಿನಕಾಯಿನಹಳ್ಳಿ ನರಶಿಂಗಪ್ಪನ ಮಗ ಶೇಷಪ್ಪನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮ್ರ್ಗಳನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲ್ಕಂಡ ದರಖಾಸ್ತು ನಮೂದಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಅದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆ ವುಳ್ಳವರು ಈ ತಾರೀಖು ಲಾಗಾಯ್ತು 3 ತಿಂಗಳ ವಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾಗ್ವೀತು.

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜ್ಞ ಆಫಿಸರ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೇ ಮಾರ್ಚ್ 1896.

1. ಕಂದಾಯದ ಬಾಕಿದಾರರಾದ ರವ್ಯೂವರಾಬಾರ್ ಮೈನರ್, ಗಾರ್ಡಿಯ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜಮ್ರ್ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತನ್ನ ಹಕ್ಕು ಬಾಧ್ಯತೆ ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ ಆಫಿಸನಲ್ಲಿ 1896ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ 1,412—8—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ತಡರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.